ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ಬಿಬಿಎಂಪಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE 25/8/2020

# ಬಿಬಿಎಂಪಿ ವಿಧೇಯಕ ಪರಿಶೀಲನಾ ಸಮಿತಿ ಮೊದಲ ಸಭೆ

25/8/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಬಿಬಿಎಂಪಿ ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ವಿಧಾನಮಂಡಲ ಜಂಟಿ ಪರಿಶೀಲನಾ ಸಮಿತಿಯ ಮೊದಲ ಸಭೆ ವಿಧಾನಸೌಧದಲ್ಲಿ ನಡೆಯಿತು.

ಸಭೆಯಲ್ಲಿ ಸಿ.ವಿ ರಾಮನ್ ನಗರ ಕ್ಷೇತ್ರದ ಶಾಸಕ ಎಸ್.ರಘು ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಸಮಿತಿಯಲ್ಲಿ ಬಿಜೆಪಿಯ 11, ಕಾಂಗ್ರೆಸ್‌ನ 6 ಮತ್ತು ಜೆಡಿಎಸ್‌ನ ಮೂರು ಶಾಸಕರು ಸದಸ್ಯರಾಗಿದ್ದಾರೆ. ಬಿಬಿಎಂಪಿ ಆಯುಕ್ತರು, ನಗರಾಭಿವೃದ್ಧಿ ಆಯುಕ್ತರು ಮತ್ತು ಕಾನೂನು ಸಲಹೆಗಾರರು ಕೆಲಸ ಮಾಡಲಿದ್ದಾರೆ.

ಸಮಿತಿಯು ಮುಂದಿನ ಮಂಗಳವಾರ ಸಭೆ ಸೇರಲು ತೀರ್ಮಾನಿಸಿದ್ದು, ನಗರದ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಅನುಸರಿಸಿ ಕಾಯ್ದೆಯನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊಂದಿದೆ. ಇದಕ್ಕೆ ಸಂಬಂಧಿಸಿ ಇನ್ನಿತರ ಮಹಾನಗರಗಳಿಗೆ ಭೇಟಿ ನೀಡಿ ಅಲ್ಲಿನ ವಸ್ತುಸ್ಥಿತಿ ಅಧ್ಯಯನ ಮಾಡುವುದು, ಈಗಿರುವ ಬಿಬಿಎಂಪಿ ವಲಯಗಳಲ್ಲಿ ವಾಸ್ತವಾಂಶಗಳನ್ನು ಪರಿಶೀಲಿಸುವುದು ಸೇರಿದಂತೆ ಅನೇಕ ವಿಚಾರಗಳನ್ನು ಕಾರ್ಯಗತಗೊಳಿಸಲಿದೆ.

ಬಿಬಿಎಂಪಿಯ ಈಗಿರುವ ವಲಯಗಳನ್ನು ಹೆಚ್ಚಿಸುವುದು, ಆ ವಲಯಗಳಿಗೆ ಆಯುಕ್ತರನ್ನು ನೇಮಕ ಮಾಡುವುದು, ಅಷ್ಟೂ ಆಯುಕ್ತರ ಮೇಲೆ ವಿಶೇಷ ಆಯುಕ್ತರನ್ನು ನೇಮಕ ಮಾಡುವುದು, ಸ್ಥಾಯಿ ಸಮಿತಿಗಳ ರಚನೆ, ಮೇಯರ್ ಅಧಿಕಾರವಧಿ ಸೇರಿದಂತೆ ಬಿಬಿಎಂಪಿ ಕಾಯ್ದೆಯ ಆಮೂಲಾಗ್ರ ಬದಲಾವಣೆಗೆ ಸಮಿತಿ ಕಾರ್ಯನಿರ್ವಹಿಸಲಿದೆ.

ಸಮಿತಿ ಸಭೆ ಕುರಿತು ಮಾತನಾಡಿದ ಶಾಸಕ ಎಸ್.ರಘು, ಬಹಳ ವರ್ಷಗಳಿಂದ ಬಿಬಿಎಂಪಿ ಆಡಳಿತ ಕೆಎಂಸಿ ಕಾಯ್ದೆಯಡಿ ನಡೆಯುತ್ತಿದೆ. ಇದರ ಬದಲಾವಣೆಗೆ ಸೂಕ್ತ ಸಲಹೆಗಳನ್ನು ಪಡೆದು ಒಂದು ಅಂತಿಮ ತೀರ್ಮಾನಕ್ಕೆ ಬರಲಾಗುವುದು. ಇದಕ್ಕೆ ಹಿರಿಯ ಶಾಸಕರ, ಸಚಿವರ, ನಗರದ ಬಿಬಿಎಂಪಿ ಸದಸ್ಯರು, ಮಾಜಿ ಮೇಯರ್‌ಗಳು ಸೇರಿದಂತೆ ಉಳಿದವರ ಸಲಹೆ ಪಡೆಯಲಾಗುವುದು. ಎಲ್ಲ ಪಕ್ಷದ ಶಾಸಕರು ಸೇರಿ ಬೆಂಗಳೂರು ನಗರದ ಅಭಿವೃದ್ಧಿಗೆ ಸೂಕ್ತ ಮಾರ್ಗಸೂಚಿಯನ್ನು ರಚಿಸಲಾಗುವುದು ಎಂದು ತಿಳಿಸಿದ್ದಾರೆ.

ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಸಭೆ ಬಳಿಕ ಮಾತನಾಡಿ, ಬೆಂಗಳೂರಿಗೆ ಹೊಸ ಕಾಯ್ದೆ ತರುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚಿಸಲಾಗಿದೆ. ಕಾಯ್ದೆ ರಚನೆಗೆ ಕರಡು ತಯಾರಿ ನಡೆಯುತ್ತಿದ್ದು, ಬೃಹತ್ ಬೆಂಗಳೂರಿನ ಆಡಳಿತ ಹೇಗಿರಬೇಕು ಎನ್ನುವ ಬಗ್ಗೆ ಸಮಾಲೋಚನೆ ನಡೆಸಲಾಗಿದೆ. ಬೆಂಗಳೂರು ನಗರದಲ್ಲಿ 15 ವಲಯಗಳ ರಚನೆ ಆಗಲಿವೆ. ಹೊಸ ಕಾಯ್ದೆಯಲ್ಲಿ ವಲಯವಾರು ಕಮಿಟಿಗಳನ್ನು ರಚನೆ ಮಾಡಲಾಗುತ್ತದೆ ಹಾಗೂ ಆ ವಲಯಗಳಿಗೆ ಸಂಪೂರ್ಣ ಅಧಿಕಾರ ಇರುತ್ತದೆ. ವಲಯವಾರು ಕಮಿಟಿಗಳ ಕೆಳಗೆ ವಾರ್ಡ್ ಕಮಿಟಿಗಳು ಇರುತ್ತವೆ ಎಂದು ತಿಳಿಸಿದರು.